ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಉತ್ತರ ಕರ್ನಾಟಕ ಭಾಗಕ್ಕೆ ಸರ್ಕಾರಿ ಕಛೇರಿಗಳ ಸ್ಥಳಾಂತರ ಕುರಿತು

ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) -

50 (352+207) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಉತ್ತರ ಕರ್ನಾಟಕ ಭಾಗದ ಹಲವು ದಶಕಗಳ ಬೇಡಿಕೆಯಾದ ಸರ್ಕಾರಿ ಕಛೇರಿಗಳ ವರ್ಗಾವಣೆ ವಿಚಾರ ಯಾವ ಹಂತದಲ್ಲಿದೆ ; ಹಲವು ರಾಜ್ಯ ಮಟ್ಟದ ಕಛೇರಿಗಳನ್ನು ಸ್ಥಳಾಂತರಿಸಿ ಆದೇಶ ಹೊರಡಿಸಿರುವುದು ನಿಜವೇ ; ಈ ಆದೇಶವನ್ನು ಯಾವ ದಿನಾಂಕದಂದು ಹೊರಡಿಸಲಾಗಿದೆ ;

(ಆ) ಮೇಲ್ಕಂಡ ಆದೇಶದನ್ವಯ ಯಾವ ಯಾವ ಕಛೇರಿಗಳನ್ನು ಸ್ಥಳಾಂತರಿಸಲಾಗಿದೆ; ಯಾವ ಯಾವ ಸರ್ಕಾರಿ ಕಛೇರಿಗಳು ಯಾವ ಸ್ಥಳಗಳಿಗೆ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆ ;

(ಇ) ಸ್ಥಳಾಂತರಿಸಿದ್ದಲ್ಲಿ ಅಲ್ಲಿನ ಕಛೇರಿಗಳ ಮುಖ್ಯಸ್ಥರು ಯಾರು ; ಹಾಗೂ ಸ್ಥಳಾಂತರಿಸದೇ ಇದ್ದಲ್ಲಿ ಕಾರಣಗಳೇನು ;

(ಈ) ಕಛೇರಿಗಳು ವರ್ಗಾವಣೆಗೊಳ್ಳಲು ಬೇಕಾಗುವ ಕಾಲಮಿತಿಯೇನು ?